

ಅಂದರು ಎಂದುಕೊಳ್ಳೋಣ, ನನಗೇನು ಭಯ! ನಾನು ಮನೆ ಬಿಟ್ಟು ಹೋಗ್ತೀನಿ. ಆದರೆ ನೀನೂ, ಕೊನೆ ಪಕ್ಷ ಕೈಯಲ್ಲಿ ಒಂದು ಡಿಗ್ರಿ ಸಹ ಇಲ್ಲ, ನೀನು ಹೊರಗೆ ಹೋದರೆ ಬೀದಿಯಲ್ಲಿ ಭಿಕ್ಷೆ ಬೇಡಬೇಕು. ಅಥವಾ ಹೋಟೆಲ್ ನಲ್ಲಿ ಎಂಜಲು ಬಳಿಯುತ್ತಾ ಬದುಕಬೇಕು. ಆದರೆ ನೀನು ಎಲ್ಲಿ ಹೋದರೂ ನನ್ನ ಸ್ನೇಹಿತರು ಇರ್ತಾರೆ. ಅವರಿಗೆ ಹೇಳಿದೆ ಅಂದುಕೊ ನಿನ್ನೊಡನೆ ಮಜಾ ಮಾಡ್ತಾರೆ. ಅಷ್ಟೇ ಅಲ್ಲ ಕಣೊ  ನನ್ನಂತಹವರು ಎಲ್ಲಿ ಹೋದರೂ ಎದುರಾಗ್ತಾರೆ ಎಂಬುದನ್ನು ಮರೆಯ ಬೇಡ ಕಣೊ' ಎಂದು ಹೆದರಿಸುತ್ತಿದ್ದನಮ್ಮ ಆ ಚಂಡಾಲ ಮಾವ.

ಯಾವಾಗಲಾದರೂ ನಾನು ನಿನಗೋ ಅಥವಾ ಬೇರೆ ಯಾರಿಗಾದರೂ ಹೇಳುತ್ತೇನೆ ಅನ್ನಿಸಿದಾಗ ಅವನ ಹಿಂಸೆ ದುಪ್ಪಟ್ಟು ಆಗುತ್ತಿತ್ತು. ನಾನು ಏನು ಮಾಡಲು ಸಾಧ್ಯವಿತ್ತು ಹೇಳಮ್ಮ?

ಏನು ಮಾಡಲಾಗುತ್ತಿರಲಿಲ್ಲ.

ನಮ್ಮ ಮನೆಯಲ್ಲಿ 'ಲಕ್ಕಿ' ಅಂತ ನಾಯಿ ಇತ್ತಲ್ಲ, ಅದರೊಂದಿಗೆ ಎಲ್ಲಾ ಹೇಳಿಕೊಂಡು ಅಳುತ್ತಿದ್ದೆ. ಅದು ನಾನು ಹೇಳುವುದನ್ನೆಲ್ಲಾ ಗಮನವಿಟ್ಟು ಕೇಳುತ್ತಿತ್ತು. ನನ್ನೊಡನೆ ತುಂಬಾ ಪ್ರೀತಿಯಿಂದ ಇರುತ್ತಿತ್ತು. ಆಗಾಗ ಆಕಾಶದಲ್ಲಿ ಕಾಣುವ ಮೋಡಗಳೊಂದಿಗೆ ಮಾತನಾಡುತ್ತಿದ್ದೆ. ನನ್ನ ಕೋಣೆಯ ಕಿಟಕಿಯವರೆಗೂ ಬಂದಿದ್ದ ಸಂಪಿಗೆ ಮರದ ಕೊಂಬೆಯೊಂದಿಗೂ ಮಾತನಾಡುತ್ತಿದ್ದೆ.

ಏನೋ ಯಾವಾಗಲು ನಿನ್ನಲ್ಲಿ ನೀನೆ ಹುಚ್ಚನಂತೆ ಏನೋ ಗೊಣಗಿಕೊಳ್ತೀಯ? ಎಂದು ನೀನು ಅಪ್ಪ ಕೇಳ್ತಿದ್ದಿರಿ. ಒಳಗೆ ಮನಸ್ಸು ರಕ್ತ ಹರಿಸುತ್ತಿದ್ದರೆ ಪಟ ಪಟ ಎಂದು ಮಾತುಗಳು ಹೇಗೆ ಹೊರಗೆ ಬರುತ್ತವೆ ಹೋಗಲಿ ನೀನೆ ಹೇಳಮ್ಮ.

ನೀವು ನನ್ನನ್ನು ಇಂಜಿನಿಯರಿಂಗ್ ಕಾಲೇಜ್ ಗೆ ಸೇರಿಸಿದಿರಿ. ಅದೇ ವೇಳೆಗೆ ಮಾವ ಬೇರೆ ಊರಿಗೆ ವರ್ಗವಾಗಿ ಹೊರಟು ಹೋದ. ಅಬ್ಬ ಆಗ ನಾನು ಎಷ್ಟು ಸಂತೋಷ ಪಟ್ಟೆನೋ!

ಚಿಕ್ಕಂದಿನಿಂದಲೂ ಶಾಲೆಯಲ್ಲಿ ನನ್ನೊಡನೆ ಹತ್ತನೇ ತರಗತಿಯವರೆಗೂ ಓದಿದ ರಘು ಇಂಜಿನಿಯರಿಂಗ್ ಕಾಲೇಜ್ ನಲ್ಲಿ ಕಾಣಿಸಿದ ಕಣಮ್ಮ, ಬಾಲ್ಯದ ಗೆಳಯ ಮತ್ತೆ ಸಂಧಿಸಿದ್ದು ತುಂಬಾ ಸಂತೋಷವಾಯ್ತು, ತರಗತಿಯಲ್ಲಿ ನನ್ನ ಪಕ್ಕದಲ್ಲೇ ಕೂರುತ್ತಿದ್ದ.

ಒಂದು ದಿನ ನನ್ನ ಮನದಾಳದ ನೋವನ್ನೆಲ್ಲಾ ಅವನೊಡನೆ ಹೇಳಿಕೊಂಡು ಬಿಟ್ಟೆನಮ್ಮಾ, ಅಲ್ಲಿಯವರೆಗೂ ನನ್ನಲ್ಲಿಯೇ ನಾನು ಅನುಭವಿಸಿದ ವೇದನೆಯನ್ನೆಲ್ಲಾ ಅವನ ಮುಂದೆ ಹೇಳಿಕೊಂಡ ನಂತರ ಮನಸ್ಸು ಎಷ್ಟೋ ಹಗುರವಾಯಿತು ಎನ್ನಿಸಿತು. ಆದರೆ ನಾನು ಇದುವರೆಗೂ ಅನುಭವಿಸಿದುದಕ್ಕಿಂತಲೂ ಭಯಂಕರವಾದ ಪ್ರಮಾದವನ್ನು ಎದುರಿಸಬೇಕಾಗುವುದೆಂದು ನನಗೇನು ಗೊತ್ತು?

ಆ ನಂತರ ಸೋಮವಾರ ಕಾಲೇಜಿಗೆ ಹೋಗುವ ವೇಳೆಗೆ ಎಲ್ಲರೂ ನನ್ನನ್ನು ನೋಡಿ ಹಂಗಿಸುತ್ತಾ ನಗುತ್ತಿರುವುದನ್ನು ನೋಡಿ ಬೇಸರವೆನಿಸಿತು, ಅದು ನನ್ನ ಅನುಮಾನವೇನೋ ಎಂದುಕೊಂಡು ತರಗತಿಗೆ ಹೋದೆ, ಹಿಂದಿನಿಂದ ಹಲೋ, ಹಾಯ್, ಒಳ್ಳೆ ರಸಭರಿತ ರಸಪುರಿ ಕಣೋ... ನೋಡಿದರೆ ಬಾಯಲ್ಲಿ ನೀರೂರುವುದು ಕಣೋ... ಎಂಬ ಹಾಡು ಕೇಳಿ ಹಿಂತಿರುಗಿ ನೋಡಿದರೆ ಎಲ್ಲರೂ ನಗುತ್ತಿದ್ದರು.

ಆ ದಿನವೇ ರಘು ನನ್ನ ಪಕ್ಕದಲ್ಲಿ ಕೂರಲಿಲ್ಲ, ಆ ನಂತರ ಇನ್ನೆಂದೂ ನನ್ನ ಪಕ್ಕದ ಸೀಟ್ ನಲ್ಲಿ ಕೂರಲೇ ಇಲ್ಲ. ಬಾತ್ ರೂಂ ಗೆ ಹೋದಾಗ ನಿಜವಾದ ವಿಷಯವೇನೆಂದು ತಿಳಿಯಿತು. 'ಪ್ಲೀಸ್ ಕಾಂಟಾಕ್ಟ್...ಫಾರ್ ಗೇ ಸೆಕ್ಸ್ .... ಕೇವಲ ಹುಡುಗರಿಗೆ ಮಾತ್ರ. ಮಜಾ ಮಾಡಲು ಒಬ್ಬ ಹುಡುಗ ಬೇಕೆ? ರಸಪುರಿಯನ್ನು ಹಿಂಡಿ ನೋಡಿ ... ಎಂದು ಗೋಡೆಗಳ ಮೇಲೆಲ್ಲಾ ನನ್ನ ಹೆಸರು ಅಸಹ್ಯವಾಗಿ ಬರೆದಿದ್ದರಮ್ಮ. ತುಂಬಾ ಅಶ್ಲೀಲವಾಗಿ ಚಿತ್ರಗಳನ್ನು ಬರೆದಿದ್ದರಮ್ಮ.

ಅಲ್ಲಿಯವರೆಗೂ ನನಗೆ 'ಗೇ' ಎಂದರೆ ಏನೆಂದೇ ತಿಳಿಯದಮ್ಮ.

ಏನು ಮಾಡಬೇಕೆಂದು ತಿಳಿಯಲಿಲ್ಲ, ಓಡೋಡಿ ಬಂದು ಬಸ್ಸು ಹತ್ತಿಕೊಂಡು ಮನೆಗೆ ಬಂದುಬಿಟ್ಟೆ. ಕಾಲೇಜಿಗೂ ಹೋಗಲಾಗುತ್ತಿರಲಿಲ್ಲ. ಮನೆಯಲ್ಲೂ ಇರಲಾಗುತ್ತಿರಲಿಲ್ಲ. ಪ್ರಪಂಚವೆಲ್ಲವೂ ನರಕದಂತೆ ಕಾಣಿಸುತ್ತಿತ್ತು. ಸಾಯಬೇಕೆಂದು ಒಂದೆರಡು ಸಲ ಪ್ರಯತ್ನಿಸಿದ್ದೆನಮ್ಮ, ಆದರೆ ಯಾಕೋ ಸಾಯಲಿಲ್ಲ.

ಚಿಕ್ಕಂದಿನಿಂದಲೂ ನನಗೆ ಗಂಡಸರೆಂದರೆ ತುಂಬಾ ಹೆದರಿಕೆಯಾಗುತ್ತಿತ್ತು. ಅದಕ್ಕೆ ನಾನು ಅಪ್ಪನೊಡನೆ ಸಹ ಹೆಚ್ಚು ಮಾತನಾಡುತ್ತಿರಲಿಲ್ಲ. ಆ ಹಾಳು ರಘು ಮಾಡಿದ ಕೆಲಸದಿಂದ ಆ ಭಯ ಇನ್ನು ಹೆಚ್ಚಾಗಿ ಬಿಟ್ಟಿತು.

ಆಗಲೇ ನನಗೆ ಪಾವನಿಯ ಪರಿಚಯವಾಯ್ತು. ಪಾವನಿ ತುಂಬಾ ಒಳ್ಳೆಯವಳಮ್ಮ, ತುಂಬಾ ತಿಳಿವಳಿಕೆಯುಳ್ಳವಳು, ನೀನು ನಮ್ಮ ಸ್ನೇಹವನ್ನು ಅನುಮಾನಿಸಿದೆಯಮ್ಮ. ಆ ಹುಡುಗಿಯೊಡನೆ ಮಾತನಾಡ ಬೇಡವೆಂದೆ, ಆದರೆ ಪಾವನಿಯ ಸ್ನೇಹವನ್ನು ನಾನು ಕಳೆದುಕೊಳ್ಳಲಾರೆನಮ್ಮ, ಪಾವನಿ ನನಗೆ ತುಂಬಾ ವಿಷಯಗಳನ್ನು ಅರ್ಥವಾಗುವಂತೆ ತಿಳಿಸಿದಳು. ಇಂಟರ್ನೆಟ್ ಮೂಲಕ ನನಗೆ ಎಷ್ಟೋ ಜನರ ಪರಿಚಯ ಮಾಡಿಸಿದಳು. ಅವರ ಜೀವನ ಹೇಗೆಂದು ತಿಳಿಯುವಂತೆ ಮಾಡಿದಳು. ನನ್ನನ್ನು ಕುರಿತು ನಾನು ಮಾತನಾಡುವಂತೆ ಮಾಡಿದಳು.

ಈಗ ನಾನು ಎಲ್ಲಾ ಕಡೆ ಮಾತನಾಡುತ್ತಿದ್ದೇನಮ್ಮ, ಅಮ್ಮ ಇನ್ನು ಕೆಲವು ಹುಡುಗರ ಬಾಲ್ಯ ಹಾಳಾಗಬಾರದೆಂದು ನಾನು ಮಾತನಾಡುತ್ತಿದ್ದೇನಮ್ಮ. ಕೇವಲ ಹುಡುಗಿಯರ ವಿಷಯದಲ್ಲಿ ಮಾತ್ರವಲ್ಲ, ಹುಡುಗರ ಭದ್ರತೆಯ ಬಗ್ಗೆ ಸಹ ಎಚ್ಚರಿಕೆಯಿಂದ ಇರಬೇಕೆಂದು ಎಲ್ಲರಿಗೂ ಮಾತನಾಡುತ್ತಿದ್ದೇನಮ್ಮ. ಹೇಳಬಾರದ ಮಾತುಗಳು ಯಾವುವೋ, ಮಾಡಬಾರದ ಕೆಲಸಗಳ್ಯಾವುವೋ, ಮುಟ್ಟಬಾರದ ಕೆಲಸಗಳ್ಯಾವುವೋ.... ಎಲ್ಲರಿಗೂ ಧೈಯದಿಂದ ಮಾತನಾಡುತ್ತಿದ್ದೇನಮ್ಮ. ಆ ಕೆಲಸದಲ್ಲಿ ಪಾವನಿ ನನಗೆ ಸಹಾಯಕಿಯಾಗಿದ್ದಾಳೆ. ಇನ್ನೂ ಸುಮಾರು ಜನ ನನ್ನ ಜೊತೆಯಲ್ಲಿದ್ದಾರೆ. ನೀನು ಅಂದುಕೊಂಡಂತೆ ಪಾವನಿ ನಾನು ಲವರ್ಸ್ ಅಲ್ಲ. ನಾವು ಮದುವೆಯಾಗುವುದಿಲ್ಲ.

ನೀನು ನನ್ನನ್ನು 'ಗೇ' ಅಂದುಕೊಳ್ಳಬಹುದು, ಆದರೆ ನಾನು 'ಗೇ' ಅಲ್ಲಮ್ಮ, ಕೊನೆ ಪಕ್ಷ ನೀನಾದರು ನನ್ನನ್ನು ನಂಬಮ್ಮ. ನಾನು ಗಂಡಸಲ್ಲವೆಂದು ನಮ್ಮ ಬಂಧುಗಳು, ಸ್ನೇಹಿತರು ಅಂದುಕೊಳ್ಳಬಹುದು, ನಾನು ಗಂಡಸೂ ಅಲ್ಲ, 'ಗೇ'ನೂ ಅಲ್ಲ, ಹೆಂಗಸೂ ಅಲ್ಲ, ನಾನು ಮನುಷ್ಯ, ನನ್ನನ್ನು ಮನುಷ್ಯನಾಗಿ ಯಾರು ಗುರುತಿಸ್ತಾರೋ ಅವರೊಡನೆ ಸ್ನೇಹದಿಂದ ಇರ್ತೀನಿ ಅಷ್ಟೇ.

ನಾನು ಸುಂದರವಾದ ಬಾಲ್ಯವನ್ನು ಕಳೆದುಕೊಂಡೆ. ಅಮ್ಮ ಈಗ ನಾನು ಏನು ಮಾಡಿದರೆ ನನ್ನ ಸುಂದರವಾದ ಅಮೂಲ್ಯವಾದ ಹಸುಗೂಸಿನ ಬಾಲ್ಯವನ್ನು ಪಡೆಯಲು ಸಾಧ್ಯ?

ನಾನು ಚಿಕ್ಕಂದಿನಲ್ಲಿ ಅನುಭವಿಸಿದ ಹಿಂಸೆಯನ್ನು ಮಾತಿನಲ್ಲಿ ಹೇಳಲಾಗದು, ವ್ಯಕ್ತಪಡಿಸಲಾಗದು. ಆದರೂ ಸರಿ, ಇನ್ನು ಮುಂದೆ ಯಾವ ಹುಡುಗನೂ ಅಂತಹ ನೋವನ್ನು ಅನುಭವಿಸಬಾರದೆಂದೂ, ಅಂತಹ ದಾರುಣ ಹಿಂಸೆಗೆ ಗುರಿಯಾಗಬಾರದೆಂದು, ನಾನು ಈಗ ಧೈರ್ಯದಿಂದ ಮಾತನಾಡುತ್ತಿದ್ದೇನೆ. ಧೈರ್ಯವನ್ನು ಮೈಗೂಡಿಸಿಕೊಂಡು ಮತ್ತೆ ಮತ್ತೆ ಮಾತನಾಡುತ್ತಿದ್ದೇನೆ, ಅಮ್ಮ, ನನಗೆ ಯಾವ ಭಯವೂ ಇಲ್ಲ. ನಾನು ಚೆನ್ನಾಗಿಯೇ ಇದ್ದೇನೆ, ಈ ಭಾನುವಾರ ಟಿ.ವಿ.ಯಲ್ಲಿ ನನ್ನ ಇಂಟರ್ ವ್ಯೂ ಇದೆ ನೋಡು. ಕಣ್ಣು ಒರೆಸಿಕೊಂಡು ನಗಮ್ಮ, ನಕ್ಕರೆ ನೀನು ತುಂಬಾ ಚೆನ್ನಾಗಿರ್ತಿಯ.

ಎಂದೆಂದಿಗೂ ನಿನ್ನ
ಮುದ್ದು